**ಕರ್ನಾಟಕ ಮಾಹಿತಿ ಆಯೋಗದಲ್ಲಿ ದಿ: 02-05-2019 ರಂದು ಮಧ್ಯಾಹ್ನ 12:30 ಗಂಟೆಗೆ ಮಾನ್ಯ ರಾಜ್ಯ ಮುಖ್ಯ ಮಾಹಿತಿ ಆಯುಕ್ತರವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯ ನಡವಳಿ**

**ಸಭೆಯಲ್ಲಿ ಹಾಜರಿದ್ದವರು:-**

1. ಶ್ರೀ ಎಲ್. ಕೃಷ್ಣಮೂರ್ತಿ, ರಾಜ್ಯ ಮುಖ್ಯ ಮಾಹಿತಿ ಆಯುಕ್ತರು.
2. ಶ್ರೀ ಎನ್.ಪಿ. ರಮೇಶ್, ರಾಜ್ಯ ಮಾಹಿತಿ ಆಯುಕ್ತರು.
3. ಶ್ರೀ ಪಿ.ಜಿ. ವಿಜಯ ಕುಮಾರ್, ರಾಜ್ಯ ಮಾಹಿತಿ ಆಯುಕ್ತರು.
4. ಶ್ರೀ ಎಸ್.ಎಲ್ ಪಾಟೀಲ್, ರಾಜ್ಯ ಮಾಹಿತಿ ಆಯುಕ್ತರು.
5. ಶ್ರೀ ಹೆಚ್.ಪಿ. ಸುಧಾಮ ದಾಸ್, ರಾಜ್ಯ ಮಾಹಿತಿ ಆಯುಕ್ತರು.
6. ಡಾ॥ ಕೆ.ಇ. ಕುಮಾರಸ್ವಾಮಿ, ರಾಜ್ಯ ಮಾಹಿತಿ ಆಯುಕ್ತರು.
7. ಡಾ॥ ಲಿಂಗರಾಜ್ .ಕೆ, ರಾಜ್ಯ ಮಾಹಿತಿ ಆಯುಕ್ತರು.
8. ಶ್ರೀಮತಿ ಹೊನ್ನಾಂಬ .ಎಸ್, ಕಾರ್ಯದರ್ಶಿ.
9. ಶ್ರೀಮತಿ ಲಕ್ಷ್ಮೀ.ಕೆ ಅಧೀಕ್ಷಕರು.

**ಸಭೆಯಲ್ಲಿ ಚರ್ಚಿಸಲಾದ ವಿಷಯಗಳು:**

ಆಯೋಗದ ಕಾರ್ಯದರ್ಶಿಯವರು ಸಭೆಗೆ ಆಗಮಿಸಿದ್ದ ಮಾನ್ಯ ಮುಖ್ಯ ಮಾಹಿತಿ ಆಯುಕ್ತರು ಹಾಗೂ ಎಲ್ಲಾ ಮಾಹಿತಿ ಆಯುಕ್ತರುಗಳಿಗೆ ಸ್ವಾಗತವನ್ನು ಕೋರಿದರು.

1. **ಆಯುಕ್ತರ ಸ್ಥಾನಮಾನ ವಿಚಾರ ಕುರಿತು ಚರ್ಚೆ.**

ರಾಜ್ಯ ಮಾಹಿತಿ ಆಯುಕ್ತರ ಸೇವಾ ಷರತ್ತುಗಳು ಮಾಹಿತಿ ಹಕ್ಕು ಅಧಿನಿಯಮ 2005ರ ಪ್ರಕರಣ 16(5)(ಬಿ)ರಲ್ಲಿ

ರಾಜ್ಯ ಮಾಹಿತಿ ಆಯುಕ್ತರಿಗೆ ಸಂದಾಯ ಮಾಡತಕ್ಕ ಸಂಬಳ ಮತ್ತು ಭತ್ಯೆಗಳು ಹಾಗೂ ಆತನ ಇತರ ಸೇವಾ ನಿಬಂಧನೆಗಳು ಹಾಗೂ ಷರತ್ತುಗಳು ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿಯ ಸಂಬಳ ಮತ್ತು ಭತ್ಯೆಗಳು ಮತ್ತು ಇತರ ಸೇವಾ ನಿಬಂಧನೆಗಳು ಮತ್ತು ಷರತ್ತುಗಳಂತೆಯೆ ಇರತಕ್ಕದ್ದು.

ರಾಜ್ಯ ಮಾಹಿತಿ ಆಯುಕ್ತರುಗಳಿಗೆ ಸ್ಥಾನಮಾನ ಹೊರತುಪಡಿಸಿ ಉಳಿದೆಲ್ಲಾ ಸೌಲಭ್ಯಗಳನ್ನು ಮಾನ್ಯ ಮುಖ್ಯ ಕಾರ್ಯದರ್ಶಿಯವರಿಗೆ ನೀಡಿರುವಂತೆ ನೀಡಲಾಗಿದೆ. ರಾಜ್ಯ ಮಾಹಿತಿ ಆಯುಕ್ತರುಗಳಿಗೆ ಮುಖ್ಯ ಕಾರ್ಯದರ್ಶಿಯವರ ಸ್ಥಾನಮಾನ ನೀಡುವಂತೆ ಹಲವಾರು ಬಾರಿ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಲಾಗಿದ್ದು, ಸರ್ಕಾರವು ಯಾವುದೇ ಕ್ರಮ ಜರುಗಿಸದ ಹಿನ್ನಲೆಯಲ್ಲಿ ಮಾನ್ಯ ಮುಖ್ಯ ಕಾರ್ಯದರ್ಶಿರವರ ಸ್ಥಾನಮಾನಕ್ಕಾಗಿ ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ರಿಟ್ ಅರ್ಜಿ ಸಲ್ಲಿಸಿದ್ದು, ನ್ಯಾಯಾಲಯದಲ್ಲಿ ಪ್ರಕರಣವನ್ನು ಪ್ರತಿನಿಧಿಸಲು ನೇಮಕ ಮಾಡುವ ವಕೀಲರ ವೃತ್ತಿಶುಲ್ಕ ಮತ್ತು ಇತರೆ ಖರ್ಚುಗಳನ್ನು ಅರೆ ನ್ಯಾಯಿಕ ಸಂಸ್ಥೆಯಾದ ಕರ್ನಾಟಕ ಮಾಹಿತಿ ಆಯೋಗದಿಂದಲೇ ಭರಿಸಬೇಕೆಂದು ಮಾನ್ಯ ಆಯುಕ್ತರಾದ ಶ್ರೀ ಸುಧಾಮ ದಾಸ್ ರವರು ತಿಳಿಸಲಾಗಿ, ಉಳಿದೆಲ್ಲಾ ಆಯುಕ್ತರು

ಸರ್ವಾನುಮತದಿಂದ ಸಮ್ಮತಿಸಿರುತ್ತಾರೆ. ಅದರಂತೆ ಮುಂದಿನ ದಿನಗಳಲ್ಲಿ ವಕೀಲರ ಶುಲ್ಕ ಮತ್ತು ಇತರೆ ವೆಚ್ಚ ಭರಿಸಲು ಒಪ್ಪಿ ಕಾರ್ಯದರ್ಶಿರವರು ಕ್ರಮವಹಿಸಲು ಸೂಚಿಸಲಾಯಿತು.

**2. ಅಧ್ಯಕ್ಷರ ಅನುಮತಿ ಮೇರೆಗೆ ಇತರೆ ವಿಷಯಗಳು.**

1) ನ್ಯಾಯಾಲಯ ಸಭಾಂಗಣದಲ್ಲಿ ವಿಚಾರಣೆಯಲ್ಲಿರುವ ಪ್ರಕರಣಗಳಿಗೆ ಸಂಬಂಧಿಸಿದಂತೆ ಒಂದು ಪ್ರಕರಣಕ್ಕೆ ಸಂಬಂಧಿಸಿದಂತೆ ಮಾಹಿತಿ ಒದಗಿಸದ ಒಬ್ಬ ಸಾರ್ವಜನಿಕ ಮಾಹಿತಿ ಅಧಿಕಾರಿಗೆ ಮಾತ್ರ ಗರಿಷ್ಠ ರೂ. 25,000/–ಗಳ ದಂಡ ವಿಧಿಸಬಹುದೇ ಅಥವಾ ವರ್ಗಾವಣೆಯಿಂದ ಸಾರ್ವಜನಿಕ ಮಾಹಿತಿ ಅಧಿಕಾರಿ ಸ್ಥಾನದಲ್ಲಿ ನೇಮಕಗೊಂಡ ಸಾರ್ವಜನಿಕ ಮಾಹಿತಿ ಅಧಿಕಾರಿಯೂ ಮಾಹಿತಿ ಒದಗಿಸದಿದ್ದಲ್ಲಿ ಅವರಿಗೂ ದಂಡ ವಿಧಿಸಬಹುದೆ ಎಂಬ ಬಗ್ಗೆ ಪ್ರತಿ ನ್ಯಾಯಾಲಯ ಸಭಾಂಗಣದಿಂದ ಪಟ್ಟಿಯನ್ನು ಸಿದ್ಧಪಡಿಸಿ ಹಾಗೂ ಇತರೆ ಸಂದೇಹಗಳ ಬಗ್ಗೆಯೂ ಸಹ ಮುಂದಿನ ಆಯೋಗದ ಸಭೆಯಲ್ಲಿ ಚರ್ಚಿಸಬೇಕೆಂದು ತೀರ್ಮಾನಿಸಲಾಯಿತು.

2) ನ್ಯಾಯಾಲಯ ಸಭಾಂಗಣದಲ್ಲಿ ವೇದಿಕೆ ಅಳವಡಿಸುವ ಸಂಬಂಧ ಈಗಾಗಲೇ ನೆನಪೋಲೆ ಬರೆದಿರುವುದರಿಂದ ಮುಖ್ಯ ಅಭಿಯಂತರರು, ಲೋಕೋಪಯೋಗಿ ಇಲಾಖೆ, ರವರನ್ನು ದೂರವಾಣಿ ಮೂಲಕ ಸಂಪರ್ಕಿಸಿ ಕ್ರಮವಹಿಸಲು ತೀರ್ಮಾನಿಸಲಾಯಿತು.

3) ಸಾರ್ವಜನಿಕ ಮಾಹಿತಿ ಅಧಿಕಾರಿ ಹಾಗೂ ತಹಶೀಲ್ದಾರರು, ಆನೇಕಲ್, ಬೆಂಗಳೂರು ನಗರ ಜಿಲ್ಲೆ, ಇವರಿಗೆ ಸಂಬಂಧಿಸಿದಂತೆ ಮಾಹಿತಿ ಆಯೋಗದ ನ್ಯಾಯಾಲಯ ಸಭಾಂಗಣಗಳಿಗೆ ಸಲ್ಲಿಕೆಯಾಗಿರುವ ಪ್ರಕರಣಗಳನ್ನು ಒಟ್ಟುಗೂಡಿಸಿ ಇವುಗಳನ್ನು ಪೂರ್ಣಪೀಠಕ್ಕೆ ವರ್ಗಾಯಿಸಲು ಟಿಪ್ಪಣಿ ನೀಡಲು ಮಾನ್ಯ ಆಯುಕ್ತರುಗಳಿಗೆ ಮಾನ್ಯ ಮುಖ್ಯ ಮಾಹಿತಿ ಆಯುಕ್ತರು ತಿಳಿಸಿದರು.

4) ಸಾರ್ವಜನಿಕರು/ಕಾರ್ಯಕರ್ತರು ಸಲ್ಲಿಸಿರುವ ಮನವಿಯಲ್ಲಿ ರಾಜ್ಯ ಮುಖ್ಯ ಮಾಹಿತಿ ಆಯುಕ್ತರು ಷರದಲ್ಲಿ ಮುಂದಿನ ಸಭೆಗೆ ಮಂಡಿಸಲು ತಿಳಿಸಿರುವ ಎಲ್ಲಾ ಮನವಿಯನ್ನು ಮಂಡಿಸಲಾಗಿ ಸದರಿ ದೂರನ್ನು ಮುಂದಿನ ಸಭೆಗೆ ತರಲು ತೀರ್ಮಾನಿಸಿ ಮುಂದೂಡಲಾಯಿತು.

ಎಲ್ಲರಿಗೂ ವಂದಿಸುತ್ತಾ, ಸಭೆಯನ್ನು ಮುಕ್ತಾಯಗೊಳಿಸಲಾಯಿತು.

2/5/2015

ರಾಜ್ಯ ಮುಖ್ಯ ಮಾಹಿತಿ ಆಯುಕ್ತರು